ಮೇಲಿನ ಪ್ರೀತಿಯನ್ನು ಇರಿಸಿಕೊಂಡು ಕರ್ಮ ಮಾಡುತ್ತಲೇ ನೂರು ಶರದ್ ಋತುಗಳನ್ನು ನೋಡೋಣ; **ಸರ್ವೇ ಜನಾಃ ಸುಖಿನೋ ಭವಂತು** – ಎಲ್ಲರೂ ಸುಖವಾಗಿ, ಓಜಸ್ವಿಗಳಾಗಿ, ದೃಢರಾಗಿ, ಬಲಿಷ್ಠರಾಗಿ ಬದುಕೋಣ. – ಸ್ಥೂಲವಾಗಿ ಇದು ವೇದಾಂತದ ಸಮದರ್ಶನ ತತ್ತ್ವ. ಇಂತಹ ಒಂದು ಆದರ್ಶ ಜೀವನದೃಷ್ಟಿಯನ್ನು ಉಳ್ಳ ಪ್ರಾಚೀನ ಭಾರತದ ಕಲ್ಪನೆಗೂ ತಾವು ವಾಸ್ತವವಾಗಿ ಕಂಡ ವರ್ತಮಾನದ ಭಾರತಕ್ಕೂ ಇರುವ ಕಂದರ ವಿವೇಕಾನಂದರನ್ನು ಗಾಬರಿಗೊಳಿಸಿತು. ವಿವೇಕಾನಂದರು ತಮ್ಮ ಸಂಚಾರದ ಮೂಲಕ ಕಂಡ ಭಾರತ ಹೇಗಿತ್ತು ಅಥವಾ ಇವತ್ತಿಗೂ ಹೇಗಿದೆ?

ಇಂದಿನ ಭಾರತಕ್ಕೆ ಹಿಂದಿನ ಆ ಭಾರತದ ಆದರ್ಶಗಳ ಅರಿವಿಲ್ಲ. ಅದು ಕೇವಲ ಪ್ರಾತಃಸ್ಮರಣೆಗೆ ಮಾತ್ರ. ಆ ಹಿಂದಿನ ಧರ್ಮದ ಬದಲು ಕೇವಲ ಅರ್ಥಹೀನವಾದ ಆಚರಣೆಗಳು ಮಾತ್ರ ಉಳಿದಿವೆ. 'ಘಂಟೆಯನ್ನು ಎಡಗಡೆಯಲ್ಲಿ ಬಾರಿಸುವುದೇ, ಬಲಗಡೆಯಲ್ಲಿ ಬಾರಿಸುವುದೇ, ಮಂಗಳಾರತಿಯನ್ನು ಎರಡು ಸಲ ಬೆಳಗುವುದೇ, ನಾಲ್ಕು ಸಲ ಬೆಳಗುವುದೇ – ನೀರನ್ನು ಬಲಗೈಯಿಂದ ಕುಡಿಯುವುದೇ, ಎಡಗೈಯಿಂದ ಕುಡಿಯುವುದೇ – ಮೈಲಿಗೆಯಾದ ಪಾತ್ರೆಯನ್ನು ಹುಣಸೇಹಣ್ಣಿನಿಂದ ತೊಳೆಯುವುದೇ, ಕೆಮ್ಮಣ್ಣಿನಿಂದ ತೊಳೆಯುವುದೇ' – ಇಂಥ ನಿರರ್ಥಕವಾದ ವಿಚಾರಗಳನ್ನು ಯಾರ ಮೆದುಳು ಸದಾ ಯೋಚಿಸುತ್ತದೊ ಅವರಂಥ ನಿರ್ಭಾಗ್ಯರು ಬೇರೆ ಇಲ್ಲ. ತಮ್ಮ ಇಷ್ಟಾರ್ಥ ಸಾಧನೆಗೆ ನೂರು ಬಗೆಯ ದೇವರುಗಳನ್ನು ಕಲ್ಪಿಸಿ, ನೂರು ಬಗೆಯ ವ್ರತ ಆಚರಣೆಗಳನ್ನು ಹುಟ್ಟುಹಾಕಿ, ಜನಸಾಮಾನ್ಯರನ್ನು ದಿಕ್ಕು ತಪ್ಪಿಸುತ್ತ ಪುರಾಣಗಳಲ್ಲಿ, ಶಾಸ್ತ್ರಗಳಲ್ಲಿ ಹೇಳಿದಹಾಗೆ ನಡೆಯದಿದ್ದರೆ ನರಕಪ್ರಾಪ್ತವಾಗುತ್ತದೆ, ಹಾಗೆ ನಡೆದರೆ ಸದ್ಗತಿ ಪ್ರಾಪ್ತವಾಗುತ್ತದೆ – ಇತ್ಯಾದಿಗಳಿಂದ ಜನಸಾಮಾನ್ಯರನ್ನು ಸುಲಿಯುವ ಪುರೋಹಿತಶಾಹಿ ತಂತ್ರಗಾರಿಕೆಯನ್ನು ಸೃಷ್ಟಿಸಿವೆ.

ಇದು ನಿರ್ಮಿಸಿದ ಶ್ರೇಣೀಕರಣ ಜಾತಿಭೇದಗಳು ಸ್ತ್ರೀ–ಶೂದ್ರಾದಿಗಳಿಗೆ ಅಕ್ಷರಜ್ಞಾನವನ್ನು ನಿರಾಕರಿಸಿತು; ಮಹಾತತ್ತ್ವಗಳಿಗೆ ಅವರನ್ನು ಅನಧಿಕಾರಿಗಳನ್ನಾಗಿ ಮಾಡಿತು; ಅಸ್ಪೃಶ್ಯರನ್ನು ದೂರ ಇರಿಸಿತು; ದಾರಿದ್ರ್ಯ, ಅಜ್ಞಾನ, ಮೂಢನಂಬಿಕೆಗಳಿಂದ ಸಾಮಾನ್ಯರನ್ನು ಅಧೋಗತಿಗೆ ತಳ್ಳಿತು. ಹೀಗೆ ಇವು ಪರಂಪರೆಯನ್ನು ಕುರಿತು ಎರಡು ದೃಷ್ಟಿಕೋನಗಳನ್ನು ವಿವೇಕಾನಂದರಲ್ಲಿ ಸೃಷ್ಟಿಸಿತು.

ಈ ಹಸಿದ ಹೊಟ್ಟೆಯ ಶೋಷಿತ ವರ್ಗವನ್ನು ಕಂಡು ಸ್ವಾಮೀಜಿ ಹೇಳುತ್ತಾರೆ: "ಪ್ರಪಂಚದ ಯಾವ ಧರ್ಮವೂ ಹಿಂದೂ ಧರ್ಮದಷ್ಟು ಭವ್ಯವಾಣಿಯಲ್ಲಿ ಮನುಷ್ಯತ್ವದ ಘನತೆಯನ್ನು ಬೋಧಿಸುವುದಿಲ್ಲ. ಪ್ರಪಂಚದ ಯಾವ ಧರ್ಮವೂ ದೀನದಲಿತರ ಕೊರಳನ್ನು ಹಿಂದೂ ಧರ್ಮದಷ್ಟು ಕ್ರೂರವಾಗಿ ಹಿಸುಕುವುದಿಲ್ಲ."

ಆದ್ದರಿಂದ ಅವರ ಮೊದಲ ಗಮನ ಪ್ರಾಚೀನ ಭಾರತದ ವೇದಾಂತವನ್ನು ವರ್ತಮಾನ ಭಾರತದ ಬದುಕಿನ ಸುಧಾರಣೆಗೆ ಅನುಷ್ಠಾನರೂಪಕ್ಕೆ ಇಳಿಸುವುದು. ಅದೆಂದರೆ, ವೇದಾಂತದ ತತ್ತ್ವಗಳನ್ನು ಗಿಳಿಗಳಂತೆ ಪಠಿಸುವುದಲ್ಲ, ಮಾನವನನ್ನು ದೇವರೆಂದು ಭಾವಿಸುತ್ತ ಅವನ ಸೇವೆಗೆ ತೊಡಗುವುದು. ಬದುಕಿರುವ ಈ ದೇವರು ಹಸಿವಿನಿಂದ ಸಾಯುತ್ತಿರುವಾಗ, ಅವನಿಗೆ ಅನ್ನವನ್ನು ಕೊಡುವುದೇ ಮೊದಲ ಪೂಜೆ. "ಹಸಿದ ಹೊಟ್ಟೆಗೆ ವೇದಾಂತವನ್ನು ಬೋಧಿಸುವುದು ಪಾಪ" ಎಂದರು ಸ್ವಾಮೀಜಿ.

"ಇನ್ನು ೫೦ ವರ್ಷಗಳ ಕಾಲ ಈ ಮಾತೃಭೂಮಿಯೇ ನಮ್ಮ ಆರಾಧನೆಯ ಇಷ್ಟದೈವವಾಗಬೇಕು. ಇನ್ನುಳಿದ ದೇವತೆಗಳೆಲ್ಲ ಕೆಲವು ಕಾಲ ನಮ್ಮಿಂದ ಮರೆಯಾಗಲಿ" ಎಂದು ತಮ್ಮ ಚೆನ್ನೈ ಭಾಷಣದಲ್ಲಿ ಹೇಳಿದ್ದಾರೆ. (*ನೂರು ದೇವರನೆಲ್ಲ ನೂಕಾಚೆ ದೂರ* – ಕುವೆಂಪು)

ವಿವೇಕಾನಂದರ ಪಾಲಿಗೆ ಭಾರತ ಇರುವುದು ಗುಡಿಸಲುಗಳಲ್ಲಿ–ಬಡವರಲ್ಲಿ–ಶೋಷಿತರಲ್ಲಿ. "ಗುಡಿಸಲುಗಳಲ್ಲಿ ವಾಸಿಸುತ್ತಿರುವ ಜನತೆಯೇ ರಾಷ್ಟ್ರ ಎಂಬುದನ್ನು ನೆನಪಿಡಿ" ಎಂದು ತಮ್ಮ ಪತ್ರವೊಂದರಲ್ಲಿ ಬರೆದಿದ್ದಾರೆ. ಆದಕಾರಣವೇ ತಾವು ಪಶ್ಚಿಮ ದೇಶಗಳಿಗೆ ಹೊರಟಾಗ, "ನಾನು ಕೇವಲ ಶ್ರೀಮಂತರ ಪ್ರತಿನಿಧಿ ಅಲ್ಲ; ಈ ದೇಶದ ಬಹುಸಂಖ್ಯಾತ ಬಡವರ ಪ್ರತಿನಿಧಿಯೂ ಆಗಬೇಕು. ಆದಕಾರಣ ಅವರಿಂದಲೂ ಯಥಾಶಕ್ತಿಯಾಗಿ ಹಣ ಸಂಗ್ರಹಿಸಿ" ಎಂದು ಚೆನ್ನೈನ ತಮ್ಮ ಶಿಷ್ಯ ಅಳಸಿಂಗ ಪೆರುಮಾಳ್‌ಗೆ ಹೇಳಿದರು.

ಅಮೆರಿಕಾದ ಸರ್ವಧರ್ಮ ಸಮ್ಮೇಳನದಲ್ಲಿ ಲೋಕವಿಖ್ಯಾತರಾದ ದಿನ ಸ್ವಾಮೀಜಿ ಒಬ್ಬ ಶ್ರೀಮಂತನ ಭವನದಲ್ಲಿ ಅತಿಥಿಯಾಗಿದ್ದರು. ರಾಜಯೋಗ್ಯವಾದ ಹಂಸತೂಲಿಕಾತಲ್ಪದಲ್ಲಿ ಮಲಗಿದ್ದ ಈ ಸಂನ್ಯಾಸಿಗೆ ಭಾರತದ ಬಡಜನತೆಯ ನೆನಪು ಬಂತು; ದುಃಖಿಸಿದರು. ಅವರ ದಿಂಬು ಕಂಬನಿಯಿಂದ ತೊಯ್ದು ಹೋಯಿತು. "ಓ ತಾಯಿ, ನನ್ನ ದೇಶ ದಾರುಣವಾದ ದಾರಿದ್ರ್ಯದಲ್ಲಿರುವಾಗ ನಾನು ಈ ಕೀರ್ತಿಯನ್ನು ಕಟ್ಟಿಕೊಂಡೇನು ಮಾಡಲಿ. ಇಲ್ಲಿನ ಜನ ಲಕ್ಷಗಟ್ಟಲೆ ಖರ್ಚು ಮಾಡುವಾಗ, ಹಿಡಿ ಕೂಳಿಲ್ಲದೆ ಲಕ್ಷಾಂತರ ಜನ ಅಲ್ಲಿ ಸಾಯುತ್ತಿದ್ದಾರೆ. ಅವರನ್ನು ಮೇಲೆತ್ತುವವರು ಯಾರು?" ಎಂದು ಕಣ್ಣೀರು ಹರಿಸಿದರು.

ಅನಕ್ಷರತೆ ನಮ್ಮ ಜನರನ್ನು ಅಧೋಗತಿಗೆ ತಳ್ಳುತ್ತಿರುವುದು ವಿವೇಕಾನಂದರಿಗೆ ಸ್ಪಷ್ಟವಾಗಿ ಕಾಣಿಸಿತು. ಇದಕ್ಕೂ ಕೂಡ ಪುರೋಹಿತಶಾಹಿಯೇ ಕಾರಣ ಎಂದು ಅವರು ಕಂಡುಕೊಂಡರು. ಎಲ್ಲರಿಗೂ ಸಲ್ಲಬೇಕಾಗಿದ್ದ ಜ್ಞಾನವನ್ನು ಕೆಲವೇ ಜನರ ಗುತ್ತಿಗೆಯನ್ನಾಗಿ ಮಾಡಿದ್ದು, ಹಾಗೆ ಇರುವ ತಿಳಿವೆಲ್ಲವೂ ಸಂಸ್ಕೃತದಲ್ಲಿರುವುದರಿಂದ, ಅದನ್ನು ಕೆಲವರೇ ಕಲಿಯುವಂತೆಯೂ ಉಳಿದವರಿಗೆ ಅಧಿಕಾರವಿಲ್ಲವೆಂದೂ ಹೇಳಿದ್ದು ಅನರ್ಥ ಪರಂಪರೆಗೆ ಕಾರಣವಾಯಿತು.

ಆದ್ದರಿಂದ ವೇದಾಂತದ ಮಹಾಮಹಾತತ್ತ್ವಗಳೆಲ್ಲ ಶ್ರೀಸಾಮಾನ್ಯನಿಗೆ ತಿಳಿಯುವಂತಾಗಬೇಕಾದರೆ ದೇಶಭಾಷೆಯ ಮೂಲಕವೇ ಸಾಧ್ಯ. "ನನ್ನ ಆದರ್ಶಭಾಷೆ ನನ್ನ ಗುರುದೇವನ ಭಾಷೆ. ಅದು ಬಹಳ ಗ್ರಾಮ್ಯವಾದ, ಆದರೂ ಅತ್ಯಂತ ಭಾವಪ್ರದರ್ಶಕ ಭಾಷೆಯಾಗಿತ್ತು" ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು.

ಮೊದಲು ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಬೇಕು, "ಯಾರು ಲಕ್ಷಾಂತರ ಜನರ ದುಡಿಮೆಯ ಖರ್ಚಿನಿಂದ ಶಿಕ್ಷಣ ಪಡೆದು ಅವರಿಗಾಗಿ ಏನೂ ಮಾಡುವುದಿಲ್ಲವೋ ಅಂಥವರನ್ನು ನಾನು ದ್ರೋಹಿ ಎಂದು ಕರೆಯುತ್ತೇನೆ" ಎಂದರು. ಹಾಗಾದರೆ